ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
ಆಡಳಿತ ವಿಭಾಗ registrarrur@gmail.com

ಕ್ರ. ಸಂ. ಆಶ್ರೀಮವಾವಿರಾ/ಆಡಳಿತ/ಸಿ.ನ/2025-26/ 2189 ದಿನಾಂಕ: 21.11.2025

ಇವರಿಗೆ,
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಎಲ್ಲಾ ಗೌರವಾನ್ವಿತ
ಸಿಂಡಿಕೇಟ್ ಸದಸ್ಯರು.

ಮಾನ್ಯರೇ,

ವಿಷಯ : ದಿನಾಂಕ 12.11.2025ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಕಳುಹಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 12.11.2025ರಂದು ಬುಧವಾರ ಬೆಳಗ್ಗೆ 11 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿರುವ **"ಸಿಂಡಿಕೇಟ್ ಸಭಾಂಗಣ"**ದಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,
ರಾಯಚೂರು

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

**ಲಗತ್ತು:**
ಸಿಂಡಿಕೇಟ್ ಸಭೆಯ ನಡಾವಳಿ.

**ಪ್ರತಿಗಳು:**
01. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001
02. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು-560 001
03. ಆಯುಕ್ತರ/ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ
04. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ಯಾಲೆಸ್ ರಸ್ತೆ, ಬೆಂಗಳೂರು-560001
05. ನಿರ್ದೇಶಕರು, ವೈದ್ಯಕೀಯ ಕಾಲೇಜು ಶಿಕ್ಷಣ, ಬೆಂಗಳೂರು-560 001
06. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560 001
07. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು -560 001
08. ಕುಲಸಚಿವರು(ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
09. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
10. ಮುಖ್ಯಸ್ಥರು/ಸಂಯೋಜಕರು ಎಲ್ಲಾ ಅಧ್ಯಯನ ವಿಭಾಗಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
11. ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
12. ಉಪ ಕುಲಸಚಿವರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
13. ನಿರ್ದೇಶಕರು, ಕಾ.ಅ.ಮಂ., ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
14. ಗ್ರಂಥಪಾಲಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
15. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
16. ಸಂಯೋಜಕರು, ಕ್ರೀಡಾ ಮತ್ತು ದೈಹಿಕ ಶಿಕ್ಷಣ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
17. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
18. ಕಛೇರಿ ಪ್ರತಿ.

## ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

**ದಿನಾಂಕ 12.11.2025 ರಂದು ಬುಧವಾರ ಬೆಳಗ್ಗೆ 11:00 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿರುವ "ಸಿಂಡಿಕೇಟ್ ಸಭಾಂಗಣ"ದಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.**

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು :**

1) ಡಾ. ಶಿವಾನಂದ ಕೆಳಗಿನಮನಿ, ಗೌರವಾನ್ವಿತ ಕುಲಪತಿಗಳು – ಅಧ್ಯಕ್ಷರು
2) ಡಾ. ಕೆ. ವೆಂಕಟೇಶ್, ಡೀನರು: ಸಮಾಜ ವಿಜ್ಞಾನ ನಿಕಾಯ – ಸದಸ್ಯರು
3) ಡಾ. ನಾಗರತ್ನ ಎಂ. ನಾಯ್ಕ್ – ಸದಸ್ಯರು
4) ಶ್ರೀ ಶ್ರೇಯಂಕ್ ಹೆಚ್. ವಿ. – ಸದಸ್ಯರು
5) ಡಾ. ಮೀನಾಕ್ಷಿ ಖಂಡಿಮಠ – ಸದಸ್ಯರು
6) ಶ್ರೀ ಡಿ.ಆರ್. ಚಿನ್ನ – ಸದಸ್ಯರು
7) ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ – ಸದಸ್ಯರು
8) ಶ್ರೀ ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ – ಸದಸ್ಯರು
9) ಶ್ರೀ ಚನ್ನಬಸವ ತಂದೆ ಬಸವರಾಜಪ್ಪ – ಸದಸ್ಯರು
10) ಶ್ರೀ ಚಂದ್ರಶೇಖರ ಲಿಂಗದಳ್ಳಿ – ಸದಸ್ಯರು
11) ಪ್ರೊ. ಪಾರ್ವತಿ ಸಿ.ಎಸ್., ಡೀನರು: ಶಿಕ್ಷಣ ನಿಕಾಯ (ಪ್ರಭಾರ) – ಸದಸ್ಯರು
12) ಡಾ. ಸುಯಮೀಂದ್ರ ಕುಲಕರ್ಣಿ ಡೀನರು: ವಿಜ್ಞಾನ ನಿಕಾಯ – ಸದಸ್ಯರು
13) ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
14) ಡಾ. ಚನ್ನಪ್ಪ ಎ., ಕೆ.ಎ.ಎಸ್. (ಸೀನಿಯರ್ ಸೂಪರ್ ಟೈಂ ಸ್ಕೇಲ್) – ಸದಸ್ಯ ಕಾರ್ಯದರ್ಶಿಗಳು

ಆರಂಭದಲ್ಲಿ ಕುಲಪತಿಗಳು ಹಾಜರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರನ್ನು ಸ್ವಾಗತಿಸುತ್ತಾ ಸಭೆಯನ್ನು ನಡೆಸಲು ಕುಲಸಚಿವರಿಗೆ ವಹಿಸಿದರು. ಕುಲಸಚಿವರು ಸಭೆಯ ಅರ್ಜಿದಾರರ ಪ್ರಕಾರವಾಗಿ ಸಭೆಯ ಮುಂದೆ ವಿಷಯಗಳನ್ನು ಮಂಡಿಸಿದರು.

ವಿಷಯ: ದಿನಾಂಕ 12.11.2025ರಂದು ಬುಧವಾರ ಬೆಳಿಗ್ಗೆ 11 ಗಂಟೆಗೆ ಸಿಂಡಿಕೇಟ್ ಸಾಮಾನ್ಯ ಸಭೆಯನ್ನು ಜರುಗಿಸುವ ಕುರಿತು:

**ವಿಷಯ ಕ್ರಮಾಂಕ 1**

ದಿನಾಂಕ 15.07.2025ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳ ಅನುಪಾಲನಾ ವರದಿ ಕುರಿತು ಚರ್ಚೆ:

**ನಿರ್ಣಯ:**

ಚರ್ಚಿಸಿದ ವಿಷಯಗಳನ್ವಯ ವಿಶ್ವವಿದ್ಯಾಲಯವು ಕೈಗೊಂಡ ಕ್ರಮಗಳನ್ನು ಸಭೆಯು ದೃಢೀಕರಿಸಿತು.

**ವಿಷಯ ಕ್ರಮಾಂಕ 2**

ದಿನಾಂಕ 11.09.2025ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು:

**ನಿರ್ಣಯ:** ನಡಾವಳಿಗಳ ಸಭೆಯ ವಿಷಯ 1 ರಿಂದ 24ರವರೆಗೆ ಸಭೆಯು ದೃಢೀಕರಿಸಿತು.

ವಿಷಯ ಕ್ರಮಾಂಕ 11ಕ್ಕೆ ಸಂಬಂಧಪಟ್ಟಂತೆ ಸದರಿ ಕಾಮಗಾರಿಗೆ ತಗಲುವ ವೆಚ್ಚವನ್ನು ಯಾರಾದರೂ ಒಬ್ಬ ದಾನಿಯನ್ನು ಗುರುತಿಸಿ ಅವರಿಂದ ಅಗತ್ಯ ಅನುದಾನ ಪಡೆಯಲು ನಿರ್ಣಯಿಸಿದ ವಿಷಯವನ್ನು ಈ ಕೆಳಗಿನಂತೆ ಮಾರ್ಪಾಡು ಮಾಡಲು ಸಭೆಯು ನಿರ್ಣಯಿಸಿತು.

ವಿಶ್ವವಿದ್ಯಾನಿಲಯಕ್ಕೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿಯ ಹೆಸರನ್ನು ನಾಮಕರಣ ಮಾಡಿರುವುದರಿಂದ ವಾಲ್ಮೀಕಿ ಉದ್ಯಾನವನಕ್ಕೆ ವಿಶ್ವವಿದ್ಯಾನಿಲಯ ಸ್ವಂತ ಸಂಪನ್ಮೂಲದಿಂದ ಸಭೆಯು ನಿರ್ಣಯಿಸಿತು. ಅನುದಾನ ಲಭ್ಯತೆಗೆ ಅನುಗುಣವಾಗಿ ರೂ. 15 ರಿಂದ 20 ಲಕ್ಷಗಳನ್ನು ನೀಡಲು ಸಭೆಯು ನಿರ್ಣಯವನ್ನು ಮಾರ್ಪಡಿಸಿತು.

**ವಿಷಯ ಕ್ರಮಾಂಕ 3**

ಆದರ್ಶ ಪದವಿ ಮಹಾವಿದ್ಯಾಲಯ ಯಾದಗಿರಿ ಮತ್ತು ಶ್ರೀ ಚೆನ್ನಳ್ಳಿ ಮಲ್ಲಿಕಾರ್ಜುನ ಪದವಿ ಮಹಾವಿದ್ಯಾಲಯ, ಯರಮರಸ್ ಈ ಎರಡು ಮಹಾವಿದ್ಯಾಲಯಗಳು ವಿಶ್ವವಿದ್ಯಾನಿಲಯದ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತರದೇ ಮುಚ್ಚಲಾಗಿದ್ದು, ಅದಕ್ಕಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ ಮಹಾವಿದ್ಯಾಲಯಗಳ ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಕುರಿತು:

**ನಿರ್ಣಯ:**

ಈ ವಿಷಯ ಕುರಿತು ಚರ್ಚಿಸಲಾಗಿ ಈ ಕಾಲೇಜುಗಳ ಮೇಲೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರನ್ವಯ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಅನುಮೋದನೆ ನೀಡಿತು.

**ವಿಷಯ ಕ್ರಮಾಂಕ 4**

ಸರ್ಕಾರದ ಆದೇಶದಂತೆ 2026-27ನೇ ಸಾಲಿನ ಸಂಯೋಜನೆ ಪ್ರಕ್ರಿಯೆ ಪ್ರಾರಂಭಿಸುವ ಕುರಿತು:

**ನಿರ್ಣಯ:**

ಈ ವಿಷಯ ಕುರಿತು ಚರ್ಚಿಸಲಾಗಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯುಎನ್‌ಇ 2004 ದಿನಾಂಕ 23.10.2025ರ ಕಾಲೇಜುಗಳ ಸಂಯೋಜನಾ ಪ್ರಕ್ರಿಯೆಯ ವೇಳಾಪಟ್ಟಿಗನುಗುಣವಾಗಿ 2026-27ನೇ ಸಾಲಿನಲ್ಲಿ ರಾಯಚೂರು ವಿಶ್ವವಿದ್ಯಾಲಯದ ಸಂಲಗ್ನತೆಗೆ ಒಳಪಟ್ಟಿರುವ (ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ) ಕಾಲೇಜುಗಳ ಸಂಯೋಜನಾ ಪ್ರಕ್ರಿಯೆ ಕೈಗೊಳ್ಳಲು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕ್ರರಣ 59 ರಡಿ ಸಭೆಯು ಅನುಮೋದಿಸಿತು.

**ವಿಷಯ ಕ್ರಮಾಂಕ 5**

ಶ್ರೀ ಸಂಜೀವ ಶಿಕ್ಷಣ ಮಹಾವಿದ್ಯಾಲಯದ NCTE ಮಾನ್ಯತೆ ರದ್ದುಪಡಿಸಲಾಗಿದ್ದು, 2025-26ನೇ ಸಾಲಿನ ಮುಂದುವರಿಕೆ ಸಂಯೋಜನೆಯನ್ನು ರದ್ದುಪಡಿಸಲಾಗಿತ್ತು. ಮುಂದುವರೆದು, NCTE Minutes of 47th Meeting of SRC held on 3rd OCT 2025 ಪ್ರಕಾರ ಸದರಿ ಮಹಾವಿದ್ಯಾಲಯಕ್ಕೆ NCTE ಮಾನ್ಯತೆ ರದ್ದುಗೊಳಿಸಿದ ಆದೇಶದ ಕುರಿತು:

**ನಿರ್ಣಯ:**

ಈ ವಿಷಯ ಕುರಿತು ಚರ್ಚಿಸಲಾಗಿ ಶ್ರೀ ಸಂಜೀವ ಶಿಕ್ಷಣ ಮಹಾವಿದ್ಯಾಲಯದ ಮೇಲ್ಮನವಿ APPLSRC202515148/132014 (NCTE) ಪ್ರಾಧಿಕಾರವು ದಿನಾಂಕ 27.08.2025 ರಂದು ಮಾಡಿರುವ ಆದೇಶವನ್ನು ಹಿಂಪಡೆದಿರುವುದರಿಂದ ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು ಸಭೆಯು ಅನುಮೋದಿಸಿತು.

...3

**ವಿಷಯ ಕ್ರಮಾಂಕ 6**

ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷಾ ಕಾರ್ಯಗಳಿಗೆ ವಾಹನಗಳನ್ನು ಬಾಡಿಗೆಗೆ ಪಡೆಯಲು ಟೆಂಡರ್ ಕರೆಯುವ ಕುರಿತು:

**ನಿರ್ಣಯ:**

ಈ ವಿಷಯ ಕುರಿತು ಚರ್ಚಿಸಲಾಗಿ ಸದರಿ ವಿಷಯವನ್ನು ಚರ್ಚಿಸಲಾಗಿ ಸಿಂಡಿಕೇಟ್ ಸಭೆಯು ಟೆಂಡರ್ ಕರೆಯಲು ಅನುಮೋದನೆಯನ್ನು ನೀಡಿತು.

**ವಿಷಯ ಕ್ರಮಾಂಕ 7**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವವನ್ನು ಆಯೋಜಿಸುವ ಕುರಿತು:

**ನಿರ್ಣಯ:**

ಸದರಿ ವಿಷಯವನ್ನು ಚರ್ಚಿಸಿದ ಸಿಂಡಿಕೇಟ್ ಸಭೆಯು ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವದ ಅಂಗವಾಗಿ ಮುಖ್ಯ ವೇದಿಕೆ ನಿರ್ಮಾಣ, ಸ್ವಾಗತ ಕಮಾನು, ಸಿರಿಯಲ್ ಲೈಟ್, ಪೆಂಡಾಲ್ ಹಾಗೂ ಊಟೋಪಚಾರದ ವ್ಯವಸ್ಥೆಯನ್ನು ನಿರ್ವಹಿಸಲು 4ಜಿ ಅನುಮತಿ ಇರುವ ಕೆಎಸ್ಎಮ್‌ಸಿಎ ಸಂಸ್ಥೆಗೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.

**ವಿಷಯ ಕ್ರಮಾಂಕ 8**

ಸರ್ಕಾರದ ಆದೇಶದ ಮೇರೆಗೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಿಂದ ಪರೀಕ್ಷಾ ವಿಭಾಗವನ್ನು ಸಿದ್ರಾಂಪುರದ ಸರಕಾರಿ ಮಾದರಿ ಪದವಿ ಕಾಲೇಜಿಗೆ ವರ್ಗಾಯಿಸಿದ್ದು, ಮುಂದಿನ ಎಲ್ಲಾ ಪರೀಕ್ಷಾಂಗ ವಿಭಾಗದ ಸಿಬ್ಬಂದಿಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ಸದರಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುವ ಕುರಿತು:

**ನಿರ್ಣಯ:**

ಸದರಿ ವಿಷಯ ಕುರಿತಂತೆ ಚರ್ಚಿಸಲಾಗಿ ಸಿಂಡಿಕೇಟ್ ಸಭೆಯು ಸುದೀರ್ಘವಾಗಿ ಚರ್ಚಿಸಿ ಪರೀಕ್ಷಾ ವಿಷಯವಾಗಿ ತೆಗೆದುಕೊಳ್ಳಬಹುದಾದ ಎಲ್ಲಾ ಮುಂಜಾಗೃತಾ ಕ್ರಮಗಳನ್ನು ಕೈಗೊಂಡು ನಿರ್ದಿಷ್ಟ SOP ಅನ್ನು ರೂಪಿಸಿಕೊಂಡು ಸರಕಾರಿ ಮಾದರಿ ಪದವಿ ಕಾಲೇಜಿಗೆ ಪರೀಕ್ಷಾ ವಿಭಾಗವನ್ನು ಸ್ಥಳಾಂತರಿಸಲು ಅನುಮೋದನೆ ನೀಡಲಾಯಿತು.

**ವಿಷಯ ಕ್ರಮಾಂಕ 9**

ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವ ಅಂಗವಾಗಿ ಮುಖ್ಯ ವೇದಿಕೆ ನಿರ್ಮಾಣ ಸ್ವಾಗತ ಕಮಾನು, ಸಿರಿಯಲ್ ಲೈಟ್, ಪೆಂಡಾಲ್ ಹಾಗೂ ಊಟೋಪಚಾರದ ವ್ಯವಸ್ಥೆ ನಿರ್ವಹಿಸಲು KSMCA 4G ಅನುಮತಿ ಇರುವ ಏಜನ್ಸಿಗೆ ನೀಡುವ ಕುರಿತು:

**ನಿರ್ಣಯ:**

ಈ ವಿಷಯ ಕುರಿತಂತೆ ಚರ್ಚಿಸಲಾಗಿ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವದ ಮುಖ್ಯ ವೇದಿಕೆ ಹಾಗೂ ಊಟೋಪಚಾರ ಸೇರಿದಂತೆ ಇತರೆ ವೆಚ್ಚಗಳನ್ನು ನಿರ್ವಹಿಸಲು KSMCA 4G ಅನುಮತಿ ಇರುವ ಏಜನ್ಸಿಗೆ ನೀಡಲು ಸಭೆಯು ಅನುಮೋದನೆ ನೀಡಿತು.

...4

**ವಿಷಯ ಕ್ರಮಾಂಕ 10**

ವಿವಿಧ ಉಪ-ಸಮಿತಿಗಳ ನಡಾವಳಿಗಳನ್ನು ಅನುಮೋದಿಸುವ ಕುರಿತು:

**ನಿರ್ಣಯ:**

ಈ ವಿಷಯ ಕುರಿತಂತೆ ಚರ್ಚಿಸಲಾಗಿ ದಿನಾಂಕ 10.11.2025 ರಂದು ಬೃಹತ್ ಖರೀದಿ ಸಮಿತಿ ಸಭೆ, ಗ್ರಂಥಾಲಯ ಸಲಹಾ ಸಮಿತಿ ಸಭೆ, ಪರೀಕ್ಷಾ ದುರ್ನಡತೆ ಸಮಿತಿಗಳ ಸಭೆಗಳನ್ನು ಏರ್ಪಡಿಸಿದ್ದು ಸದರಿ ಸಭೆಯ ನಡಾವಳಿಗಳ ಕುರಿತು ಚರ್ಚಿಸಲಾಗಿ ಈಗಾಗಲೇ ಎಲ್ಲಾ ಉಪ-ಸಮಿತಿಗಳನ್ನು ರಚಿಸಲಾಗಿದ್ದು ಸದರಿ ಉಪ-ಸಮಿತಿಗಳ ಸದಸ್ಯರ ಬದಲಾವಣೆಗಳಿರುವುದರಿಂದ ಸದರಿ ವಿಷಯವನ್ನು ಚರ್ಚಿಸಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಉಪ-ಸಮಿತಿಗಳ ಮರು ರಚನೆಯನ್ನು ಮಾಡಿ ಸಭೆಗಳನ್ನು ನಡೆಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.

**ವಿಷಯ ಕ್ರಮಾಂಕ 11**

ನಂದಿನಿ ಶಿಕ್ಷಣ ಮಹಾವಿದ್ಯಾನಿಲಯ ಕುರಿತು ವಿಸ್ತೃತ ಚರ್ಚೆ:

**ನಿರ್ಣಯ:**

ಸದರಿ ವಿಷಯ ಕುರಿತಂತೆ ಚರ್ಚಿಸಲಾಗಿ ವಿಶ್ವವಿದ್ಯಾನಿಲಯದ ಅಧಿನಿಯಮ ಅಧ್ಯಾಯ 9 ಪ್ರಕರಣ 63ರ ಅನ್ವಯ ಸಂಯೋಜನೆಯನ್ನು ಹಿಂಪಡೆಯುವಾಗ ಆ ಕಾಲೇಜಿನ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅವರ ಪದವಿಯನ್ನು ಪೂರ್ಣಗೊಳಿಸಲು ವಿಶ್ವವಿದ್ಯಾನಿಲಯವು ಕ್ರಮ ಕೈಗೊಳ್ಳಬೇಕಾಗಿರುವುದರಿಂದ ದ್ವಿತೀಯ ವರ್ಷದ B.Ed. ಅನ್ನು ಪೂರ್ಣಗೊಳಿಸಲು ಅನುಮತಿ ನೀಡಿ NCTE ಯಿಂದ ಮಾನ್ಯತೆ ಪಡೆಯುವವರೆಗೆ ಸದರಿ ಕಾಲೇಜಿನ ಪ್ರಥಮ ವರ್ಷದ ದಾಖಲಾತಿಗಳನ್ನು ಪಡೆಯದಂತೆ ನಿರ್ಬಂಧ ವಿಧಿಸಲು ಸಭೆಯು ತೀರ್ಮಾನಿಸಿತು.

**ವಿಷಯ ಕ್ರಮಾಂಕ 12**

ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗ, ಕ್ರೀಡಾ ವಿಭಾಗ ಮತ್ತು ಪರೀಕ್ಷಾ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಕೌಂಟೆಂಟ್, ಕ್ರೀಡಾ ಸಂಯೋಜಕರು ಮತ್ತು ತಾಂತ್ರಿಕ ಸಂಯೋಜಕರ ಸೇವಾ ಅವಧಿಯನ್ನು ಮುಂದುವರೆಸುವ ಮತ್ತು ಮಾಸಿಕ ಸಂಭಾವನೆ ಪರಿಷ್ಕರಣೆ ಕುರಿತು:

| ಕ್ರ. ಸಂ. | ಹೆಸರು | ಹುದ್ದೆ | ಪ್ರಸ್ತುತ ಪಡೆಯುತ್ತಿರುವ ಸಂಭಾವನೆ |
|---|---|---|---|
| 1 | ಶ್ರೀಮತಿ ವಿಜಯಲಕ್ಷ್ಮೀ ಆರ್. | ಅಕೌಂಟೆಂಟ್ | ರೂ. 35,000/- |
| 2 | ಶ್ರೀ ಗುರುಶಾಂತ ಬಿರಾದಾರ | ಯುಯುಸಿಎಂಎಸ್ ಕೋ-ಆರ್ಡಿನೇಟರ್ ಹಣಕಾಸು | ರೂ. 35,000/- |
| 3 | ಶ್ರೀ ಮಲ್ಲಿಕಾರ್ಜುನ ಎನ್. | ಸಂಯೋಜಕರು ಕ್ರೀಡಾ ವಿಭಾಗ | ರೂ. 32,000/- |

**ನಿರ್ಣಯ:**

ಈ ವಿಷಯ ಕುರಿತಂತೆ ಚರ್ಚಿಸಲಾಗಿ ವಿವಿಧ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸದರಿ ಸಂಯೋಜಕರ ಸೇವಾ ಅವಧಿಯನ್ನು ಮುಂದುವರೆಸಲು ತೀರ್ಮಾನಿಸಲಾಯಿತು. ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಯಿತು.

...5

**ವಿಷಯ ಕ್ರಮಾಂಕ 13**

ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳ ಚರ್ಚೆ:

**ವಿಷಯ ಕ್ರಮಾಂಕ: 1** ಸಿಂಡಿಕೇಟ್ ಸದಸ್ಯರಿಗೆ ಸೌಲಭ್ಯಗಳನ್ನು ಒದಗಿಸುವ ಕುರಿತು:

**ನಿರ್ಣಯ 1:** ವಿವಿಧ ಉಪ ಸಮಿತಿಗಳಿಗೆ ಹಾಗೂ ವಿಶ್ವವಿದ್ಯಾನಿಲಯವು ವಹಿಸಿದ ಬೇರೆ ಬೇರೆ ಜವಾಬ್ದಾರಿಗಳನ್ನು ನಿರ್ವಹಿಸಲು ಹಾಗೂ ಸಿಂಡಿಕೇಟ್ ಸಭೆಯ ದಿನಾಂಕದಂದು ಸದಸ್ಯರು ಕುಳಿತು ಚರ್ಚಿಸಲು ಒಂದು ಪ್ರತ್ಯೇಕ ಕೊಠಡಿಯನ್ನು ನೀಡುವಂತೆ ಸದಸ್ಯರು ಕೋರಿದ್ದರಿಂದ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗವು ಮಾದರಿ ಕಾಲೇಜ್‌ಗೆ ವರ್ಗಾವಣೆಗೊಂಡ ನಂತರ ಪ್ರತ್ಯೇಕ ಕೊಠಡಿಯನ್ನು ನೀಡಲು ಸಭೆಯು ತೀರ್ಮಾನಿಸಲಾಯಿತು.

**ನಿರ್ಣಯ 2:** ಮುಂದುವರೆದು ವಿಶ್ವವಿದ್ಯಾನಿಲಯದ ವಿವಿಧ ಚಟುವಟಿಕೆಗಳ ಕುರಿತಾಗಿ ಸಿಂಡಿಕೇಟ್ ಸದಸ್ಯರಿಗೆ ಮಾಹಿತಿ ನೀಡಲು ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಲು ಕೋರಿದ್ದರಿಂದ ವಿಶ್ವವಿದ್ಯಾನಿಲಯದ ಖಾಯಂ ನೌಕರರಾದ ಶ್ರೀ ರವಿಕುಮಾರ ಪಂಚಮುಖಿ ಇವರನ್ನು ನೇಮಿಸಲು ಮತ್ತು ಸರ್ವ ಸಿಂಡಿಕೇಟ್ ಸದಸ್ಯರು ತಮ್ಮ ತಮ್ಮ ವ್ಯಾವಹಾರಿಕ ಇ–ಮೇಲ್ ಐಡಿಯನ್ನು ನೀಡುವಂತೆ ಸಭೆಯು ನಿರ್ಧರಿಸಿತು.

**ವಿಷಯ ಕ್ರಮಾಂಕ: 2**

ಸಿಂಡಿಕೇಟ್ ಸದಸ್ಯರಾದ ಶ್ರೀ ಚಂದ್ರಶೇಖರ ಲಿಂಗದಳ್ಳಿ ಅವರು ಸದಸ್ಯರ ಆಸನ ಭತ್ಯೆ ಹೆಚ್ಚಿಸುವ ಪ್ರಸ್ತಾಪ ಮಂಡಿಸಿದ ಕುರಿತು:

**ನಿರ್ಣಯ 3:** ಸದರಿ ಸದಸ್ಯರು ಮಂಡಿಸಿದ ಪ್ರಸ್ತಾಪವನ್ನು ಚರ್ಚಿಸಲು ಸಭೆಯು ಸಿಂಡಿಕೇಟ್ ಸದಸ್ಯರಿಗೆ ಪ್ರಸ್ತುತ ರೂ.2000/–ಗಳ ಆಸನ ಭತ್ಯೆ ನೀಡುತ್ತಿದ್ದು ಈ ಮೊತ್ತವನ್ನು ರೂ.4000/–ಗೆ ಹೆಚ್ಚಿಸಲು ಮುಂದಿನ ಸಭೆಗಳಿಂದ ಇದು ಅನ್ವಯವಾಗುವಂತೆ ಸಭೆಯು ತೀರ್ಮಾನಿಸಿತು.

13/11

**ಡಾ. ಚನ್ನಪ್ಪ ಎ.,**
ಕೆ.ಎ.ಎಸ್.
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

14/11/25

**ಪ್ರೊ. ಶಿವಾನಂದ ಕೆಳಗಿನಮನಿ**
ಕುಲಪತಿಗಳು
ಹಾಗೂ ಸಿಂಡಿಕೇಟ್ ಸಭೆಯ ಅಧ್ಯಕ್ಷರು
ಕುಲಪತಿಗಳು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು